## ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:C7-3(ASTT)/1/2023 ಕಂ.ನಂ.1038150 ದಿನಾಂಕ: 23ನೇ ಮಾರ್ಚ್ 2023

## ಸುತ್ತೋಲೆ

ವಿಷಯ: 2023-24ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಖಾಸಗಿ ಅನುದಾನಿತ ಪ್ರಾಥಮಿಕ/ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳ ವರ್ಗಾವಣೆ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ: 1) ಕರ್ನಾಟಕ ಶಿಕ್ಷಣ ಕಾಯ್ದೆಯ ಶಿಕ್ಷಣ ಸಂಸ್ಥೆಗಳು (ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತು ಮತ್ತು ನಿಬಂಧನೆಗಳು)ನಿಯಮ-1999, ನಿಯಮ-12

2) ಸರ್ಕಾರ ಸುತ್ತೋಲೆ ಸಂಖ್ಯೆ:ಇಡಿ.100.ಎಸ್.ಒ.ಹೆಚ್.2010, ದಿನಾಂಕ:8-7-2010

**********

ಖಾಸಗಿ ಅನುದಾನಿತ ಪ್ರಾಥಮಿಕ/ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳನ್ನು ಅದೇ ಆಡಳಿತ ಮಂಡಳಿಯಿಂದ ನಡೆಯುತ್ತಿರುವಂತಹ ಮತ್ತೊಂದು ಅನುದಾನಿತ ಶಾಲೆಗೆ ಅಥವಾ ಒಂದು ಆಡಳಿತ ಮಂಡಳಿಯ ಶಾಲೆಯಿಂದ ಮತ್ತೊಂದು ಆಡಳಿತ ಮಂಡಳಿಯ ಶಾಲೆಯಲ್ಲಿನ ಖಾಲಿ ಹುದ್ದೆಗಳಿಗೆ ಅನುದಾನಿತ ಶಿಕ್ಷಕರನ್ನು ಕೋರಿಕೆ/ಪರಸ್ಪರ ವರ್ಗಾಯಿಸಲು ಕೋರಿ ಆಡಳಿತ ಮಂಡಳಿಗಳು ಪ್ರಸ್ತಾವನೆಯನ್ನು ಸಲ್ಲಿಸಲು ಕರ್ನಾಟಕ ಶಿಕ್ಷಣ ಕಾಯಿದೆ-1983ರಡಿಯಲ್ಲಿ ರಚಿಸಲಾಗಿರುವ ನಿಯಮಗಳು-1999, ಕಲಂ 12ರಲ್ಲಿ ಅವಕಾಶ ಕಲ್ಪಿಸಲಾಗಿದೆ.

2023-24ನೇ ಶೈಕ್ಷಣಿಕ ಸಾಲಿಗೆ ಖಾಸಗಿ ಅನುದಾನಿತ ಶಾಲಾ ಆಡಳಿತ ಮಂಡಳಿಗಳು ತಮ್ಮ ಅಧೀನದಲ್ಲಿ ನಡೆಯುತ್ತಿರುವ ಶಾಲೆಗಳಲ್ಲಿನ ಶಿಕ್ಷಕರುಗಳ ವರ್ಗಾವಣೆ ಪ್ರಸ್ತಾವನೆಗಳನ್ನು ಸಲ್ಲಿಸಲು ಹಾಗೂ ಪ್ರಕ್ರಿಯೆ ಕೈಗೊಳ್ಳಲು ಕೆಳಕಂಡಂತೆ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಅದರಂತೆ ವರ್ಗಾವಣೆ ಬಯಸಿರುವ ಶಾಲೆಯಲ್ಲಿ ಮಕ್ಕಳ ಅನುಪಾತಕ್ಕೆ ಅನುಗುಣವಾಗಿ ಶಿಕ್ಷಕರ ಅವಶ್ಯಕತೆಯ ಕುರಿತು ಖಚಿತಪಡಿಸಿಕೊಂಡು ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರುಗಳು ನಿಯಮಾನುಸಾರ ಪ್ರಸ್ತಾವನೆಯನ್ನು ಪರಿಶೀಲಿಸಿ ಎಲ್ಲಾ ದಾಖಲೆಗಳನ್ನು ದೃಢೀಕರಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಸಲ್ಲಿಸತಕ್ಕದ್ದು.

ಯಾವುದೇ ಉಪನಿರ್ದೇಶಕರುಗಳು ಅರ್ಹ ಪ್ರಸ್ತಾವನೆಗಳನ್ನು ಸಲ್ಲಿಸುವಂತಹ ಸಂದರ್ಭದಲ್ಲಿ ಅಪೂರ್ಣ ದಾಖಲೆಗಳನ್ನಾಗಲಿ ಅಥವಾ ಸೂಕ್ತ ಶಿಫಾರಸ್ಸು ಇಲ್ಲದೆ ಸಲ್ಲಿಸುವಂತಿಲ್ಲ ಹಾಗೂ ಅನಗತ್ಯವಾಗಿ ಪತ್ರ ವ್ಯವಹಾರಕ್ಕೆ ಎಡೆ ಮಾಡಿಕೊಡದಂತೆ ಎಚ್ಚರಿಕೆಯನ್ನು ವಹಿಸಿ ಪ್ರಸ್ತಾವನೆಯನ್ನು ನಿಯಮಗಳನ್ವಯ ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ನಿಗಧಿಪಡಿಸಿರುವಂತಹ ಕಾಲಮಿತಿಯೊಳಗೆ ಸಂಬಂಧಿಸಿದ ಆಯುಕ್ತಾಲಯಗಳ ಕಛೇರಿಗೆ ಸಲ್ಲಿಸತಕ್ಕದ್ದು. ಹಾಗೂ ನಿಗಧಿಪಡಿಸಿದ ಅವಧಿ ಮೀರಿದ ನಂತರ ಯಾವುದೇ ಪ್ರಸ್ತಾವನೆಗಳನ್ನು ಸಲ್ಲಿಸಬಾರದೆಂದು ಸಹಾ ಸೂಚಿಸಿದೆ.

**ವರ್ಗಾವಣಾ ವೇಳಾಪಟ್ಟಿ**

| ಕ್ರಮ ಸಂಖ್ಯೆ | ವಿವರ | ನಿಗಧಿತ ದಿನಾಂಕ |
|---|---|---|
| 1 | ಆಡಳಿತ ಮಂಡಳಿಗಳು ವರ್ಗಾವಣೆ ಪ್ರಸ್ತಾವನೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವ ಅಂತಿಮ ದಿನಾಂಕ | ದಿನಾಂಕ:21-03-2023 ರಿಂದ 31-5-2023 |
| 2 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಸ್ತಾವನೆ ಪರಿಶೀಲಿಸಿ ಉಪನಿರ್ದೇಶಕರುಗಳಿಗೆ ಸಲ್ಲಿಸುವ ಅಂತಿಮ ದಿನಾಂಕ | ದಿನಾಂಕ:23-03-2023 ರಿಂದ 8-6-2023 |
| 3 | ಉಪನಿರ್ದೇಶಕರು ಸೂಕ್ತ ಶಿಫಾರಸ್ಸಿನೊಂದಿಗೆ ಆಯಾ ವಿಭಾಗದ ಒಳಗೆ ಅಂದರೆ ಬೆಂಗಳೂರು/ಮೈಸೂರು ವಿಭಾಗ ರವರು ನಿರ್ದೇಶಕರು (ಪ್ರಾಥಮಿಕ/ಪ್ರೌಢ ಶಿಕ್ಷಣ) ಅದೇ ರೀತಿ ಕಲಬುರ್ಗಿ, ಧಾರವಾಡ ವಿಭಾಗದವರು ಆಯಾ ವ್ಯಾಪ್ತಿಯ ನಿರ್ದೇಶಕರು ಅಪರ ಆಯುಕ್ತರ ಕಛೇರಿಗೆ ಸಲ್ಲಿಸುವುದು. | ದಿನಾಂಕ:29-3-2023 ರಿಂದ 20-6-2023 |
| 4 | ಅಂತರ ವಿಭಾಗದ ವರ್ಗಾವಣೆ ಕೋರಿ ಬಂದ ಪ್ರಸ್ತಾವನೆಗಳನ್ನು ಸಂಬಂಧಿಸಿದ ಅಪರ ಆಯುಕ್ತರ ಶಿಫಾರಸ್ಸಿನೊಂದಿಗೆ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ರವರಿಗೆ ಸಲ್ಲಿಸುವುದು. | ದಿನಾಂಕ:30-03-2023 ರಿಂದ 22-06-2023 |
| 5 | ವರ್ಗಾವಣೆ ಕೋರಿ ಬಂದ ಪ್ರಸ್ತಾವನೆಯನ್ನು ಸಬಂಧಿಸಿದ ಪ್ರಾಧಿಕಾರಗಳು ಇತ್ಯರ್ಥಪಡಿಸಲು | ದಿನಾಂಕ:01-06-2023ರಿಂದ 31-07-2023 |

**ಅನುದಾನಿತ ಶಿಕ್ಷಕರ ವರ್ಗಾವಣಾ ಪ್ರಸ್ತಾವನೆಯಲ್ಲಿ ಕಡ್ಡಾಯಪಡಿಸಿರುವ ದಾಖಲೆಗಳು/ಷರತ್ತುಗಳು**

1. ವರ್ಗಾವಣೆ ಪ್ರಸ್ತಾವನೆಗಳನ್ನು ಸಲ್ಲಿಸುವಂತಹ ಸಂದರ್ಭದಲ್ಲಿ
   ಎ) ಅನುದಾನಸಹಿತವಾಗಿ ಮಂಜೂರಾದ ಹುದ್ದೆಯ ಪ್ರತಿ
   ಬಿ) ಕರ್ತವ್ಯ ನಿರ್ವಹಿಸುತ್ತಿರುವ ವಿವರ
   ಸಿ) ಖಾಲಿ ಹುದ್ದೆ ವಿವರ
2. ಎರಡೂ ಶಾಲೆಗಳಲ್ಲಿ ಎಸ್.ಎ.ಟಿ.ಎಸ್ ಪ್ರಕಾರ ಇರುವಂತಹ 2022-23ನೇ ಸಾಲಿನ ಫೆಬ್ರುವರಿ-2023ರ ಅಂತ್ಯಕ್ಕೆ ಇದ್ದಂತೆ ಮಕ್ಕಳ ದಾಖಲಾತಿ-ಹಾಜರಾತಿ ಪ್ರತಿ (ಪ್ರಸ್ತಾವನೆ ಸಲ್ಲಿಸುವ ಸಂದರ್ಭದಲ್ಲಿ)
3. ಪ್ರಸ್ತುತ ಹೆಚ್.ಆರ್.ಎಂ.ಎಸ್ ಬಿಲ್ಲಿನ ಪ್ರತಿ
4. ಶಿಕ್ಷಕರ /ಅಂತರ್ ಆಡಳಿತ ಮಂಡಳಿ ವರ್ಗಾವಣೆಗಾಗಿ ಎರಡೂ ಆಡಳಿತ ಮಂಡಳಿಯವರು ನೀಡಿರುವ ಒಪ್ಪಿಗೆ ಪತ್ರ
5. ಶಿಕ್ಷಕರನ್ನು ವರ್ಗಾಯಿಸಲು ಶಿಕ್ಷಕರ ಒಪ್ಪಿಗೆ ಪತ್ರ
6. ಶಿಕ್ಷಕರ ನೇಮಕಾತಿಯನ್ನು ಅನುಮೋದಿಸಿರುವ ಪ್ರತಿ
7. ಶಿಕ್ಷಕರನ್ನು ಶಾಲೆಯಲ್ಲಿನ ಖಾಲಿ ಹುದ್ದೆಗೆ ವರ್ಗಾಯಿಸುತ್ತಿದ್ದಲ್ಲಿ ಹುದ್ದೆ ತೆರವಾಗಿರುವ ಬಗ್ಗೆ ಅಗತ್ಯ ಪೂರಕ ದಾಖಲೆಯ ಪ್ರತಿ
8. ಅಂತರ ಜಿಲ್ಲಾ/ಅಂತರ್ ಆಡಳಿತ ಮಂಡಳಿ ವರ್ಗಾವಣೆ ಬಯಸುವಂತಹ ಶಾಲಾ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಸ್ತಾವನೆಯಲ್ಲಿ ಎಲ್ಲಾ ದಾಖಲೆಗಳನ್ನು ದೃಢೀಕರಿಸಿ ಶಿಕ್ಷಕರ ಅಗತ್ಯತೆಯ ಬಗ್ಗೆ ಸ್ಪಷ್ಟಪಡಿಸಿ ಶಿಕ್ಷಕರು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನಿರ್ದೇಶಕರಿಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ಸಲ್ಲಿಸುವುದು.
9. ಉಪನಿರ್ದೇಶಕರು ಪ್ರಸ್ತಾವನೆಯನ್ನು ರಾಜ್ಯ ಕಛೇರಿಗೆ ಸಲ್ಲಿಸುವಂತಹ ಸಂದರ್ಭದಲ್ಲಿ ಸೂಕ್ತ ಶಿಫಾರಸ್ಸಿನೊಂದಿಗೆ ಸಲ್ಲಿಸಬೇಕು.
10. ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ನಿಯಮ 99 ರ ಅನೆಕ್ಷರ್ 04 ರ ಸಿಬ್ಬಂದಿ ರಚನಾ ವಿನ್ಯಾಸದ ಅನ್ವಯ ಹುದ್ದೆ ಅಗತ್ಯತೆ ಮತ್ತು ವಿಷಯ ಹೊಂದಾಣಿಕೆ ಹೊಂದಿರತಕ್ಕದ್ದು
11. ಎರಡೂ ಶಾಲೆಗಳ ಶಿಕ್ಷಕರ/ಸಿಬ್ಬಂದಿಗಳ ಸೇವಾ ವಿವರ
12. ವರ್ಗಾವಣೆ ಬಯಸುವ ಶಿಕ್ಷಕರು ಸದರಿ ಶಾಲೆಯಲ್ಲಿ ಕನಿಷ್ಠ ಸೇವಾವಧಿ **ಮೂರು ವರ್ಷಗಳನ್ನು** ಪೂರೈಸಿರತಕ್ಕದ್ದು. ಅದನ್ನು ಖಚಿತಪಡಿಸಿಕೊಂಡೇ ಉಪನಿರ್ದೇಶಕರು ಪ್ರಸ್ತಾವನೆ ಸಲ್ಲಿಸತಕ್ಕದ್ದು.

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ
2. ರಾಜ್ಯದ ಎಲ್ಲಾ ತಾಲ್ಲೂಕು/ವಲಯ ಕ್ಷೇತ್ರ ಶಿಕ್ಷಣಾಧಿಕರಿಗಳಿಗೆ ಸೂಕ್ತ ಕ್ರಮಕ್ಕಾಗಿ,

ಪ್ರತಿಯನ್ನು:-

1. ಅಪರ ಆಯುಕ್ತರು, ಧಾರವಾಡ ಮತ್ತು ಕಲಬುರ್ಗಿ ರವರ ಮಾಹಿತಿಗಾಗಿ
2. ಕಛೇರಿ ಪ್ರತಿ.